'ಹೋಗಿಬರ್ತೀವಿ. ರೊಕ್ಕ ಪಕ್ಕ ಬೇಕಂದ್ರ ಅಣ್ಣಗ ಫೋನ್ ಮಾಡು' ಅಂತ ದೊಡ್ಡಸ್ತಿಕೆ ಮಾತು ಹೇಳಿದಳು. ಮಕ್ಕಳು ಟಾಟಾ ಮಾಡಿದವು. ದೊಡಮ್ಮ ಅವನ ಕೈಯೊತ್ತಿದಳು. ಆ ಸ್ಪರ್ಶದಲ್ಲಿ ಏನೆಲ್ಲಾ ಮಾತುಗಳಿದ್ದವು? ಅಬ್ರಾಮನ ಗಂಟಲು ಬಿಗಿದಿತ್ತು.

***

ಕತ್ತಲ ಡೋಲಿಯಲ್ಲಿ ನಿದ್ರೆಯ ರಾಣಿ ಬರುವ ಸುದ್ದಿಯನ್ನು ಕೆಂಪು ದಾವಣಿ ತೊಟ್ಟ ಸಂಜೆ ಸಖಿ ಹೊತ್ತು ತರುವಾಗ ಹಕ್ಕಿಗಳೆಲ್ಲ ಮತ್ತೆ ಮರದ ತಮ್ಮ ಗೂಡಿನ ಬಳಿ ಬಂದು ಚಿವು ಚಿವು ಶುರುವಚ್ಚಿಕೊಂಡಿದ್ದವು. ಕತ್ತಲ ಸುಗಂಧ ಮೆಲ್ಲಗೆ ದವಾಖಾನಿಯ ಅಂಗಳವನ್ನು ಆವರಿಸುತ್ತಿತ್ತು. ರಹೀಮ ಮತ್ತು ಅವನ ಹೆಂಡತಿ ಬಳ್ಳಾರಿಯಿಂದ ಕಟಗು ಜ್ವಾಳದ ರೊಟ್ಟಿ, ಕಡ್ಲಿ ಪುಡಿ, ಹೆಸ್ರುಕಾಳು ಪಲ್ಯೆ, ಮೊಸರನ್ನದ ಉಂಡಿ ಬುತ್ತಿ ತಂದಿದ್ದರು. ಹದಿನೈದು ದಿನಗಳಿಂದ ಆ ಆಸ್ಪತ್ರೆಯ ಕೂಪನ್ ಊಟ ತಿಂದು ತಿಂದು ಬಾಯಿ ಮರಗಟ್ಟಿದ್ದಕ್ಕೆ ರಹೀಮನ ಕುಲಾವಿ ನೋಡಿಕ್ಯಂಡು ಕುಂದ್ರುವ ಯಾವ ಪುರುಸೊತ್ತೂ ಇಲ್ಲದೆ ರುಕಿಯಾ, ಅಬ್ರಾಮ ಹೊಟ್ಟೆ ತುಂಬೂಮಟ ಬತಾಬಡಿದರು. ರಹೀಮನ ಹೆಂಡತಿ ನೀಲವ್ವ ಮಧ್ಯೆ ಮಧ್ಯೆ ಉಳ್ಳಾಗಡ್ಡಿ ಸುಲಿದು ಕೊಡುತ್ತಿದ್ದಳು. ಬಡೇಬಾ ಕೂಡ ಮೊಸರಿನ ಒಂದು ಉಂಡೆ ಮುಕ್ಕಿದ.

ರಹೀಮ ಅಷ್ಟಕ್ಕೂ ಬಡೇಬಾನ ತಮ್ಮ ಇಮಾಮ್ ಸಾಬ ಇಟ್ಟುಕೊಂಡವಳ ಮಗ. ಅವನ ತಮ್ಮ, ತನ್ನದೇಗಾಡಿಯಲ್ಲಿ ವ್ಯಾನ್ ಡ್ರೈವರನಾಗಿ ಕೆಲಸಕ್ಕೆ ಇಟ್ಟುಕೊಂಡಿದ್ದನಾದರೂ ಕೀಳುಜಾತಿಯವಳ ಮಗ, ಯಜಮಾಂತಿಯ ಮಗ ಎಂಬ ವಕ್ರ ದೃಷ್ಟಿ, ಕೊಂಕು ಮಾತುಅವನನ್ನ ಇರಿಯುತ್ತಲೇ ಇತ್ತು. ರಹೀಮನಿಗೆಎಂದಿಗೂ ತನ್ನ ತಾಯಿಗೆ ಯಜಮಾನಿ ಎಂಬ ಪಟ್ಟದಿಂದ ಮುಕ್ತಿಯಿಲ್ಲ ಎಂಬುದು ಗೊತ್ತಾಗಿ ಹೋಗಿತ್ತು. ಅವನ ಇಡೀ ಪ್ರಯತ್ನಗಳೆಲ್ಲವೂ ಅದನ್ನು ಮೀರುವುದಕ್ಕೇನೋ ಎಂಬುದಕ್ಕೆ ಮೀಸಲಾದಂತಿತ್ತು.

ಹಗಲ ಸೂರ್ಯನಂತೆಹೊರಟು ನಿಂತಿದ್ದಅಬ್ರಾಮ 'ಬಾಬಾಗೆ ಸ್ವಲ್ಪ ಸಿಟ್ಟು ಜಾಸ್ತಿ. ಅವರಿವರು ಅಂತ ನೋಡದೇನೆ ಬಾಯಿಗೆ ಬಂದಂಗೆ ಅಂದುಬಿಡ್ತಾನೆ. ನಾವು ಮನಿಯವ್ರು ಸುಧಾರಿಸಿಕೊಳ್ಳದಂಗೆ ಇನ್ಯಾರು ಸುಧಾರಿಸಿಕೊಳ್ತಾರೆ... ಆತ ಏನಂದ್ರೂ ಮನ್ಸಿಗೆ ಆಕ್ಯಬ್ಯಾಡ. ನೀನೂ ಈ ಮನಿ ಮಗಾ ಇದ್ದಿ ಭಯ್ಯ! ಆತ ಏನೇ ಅಂದ್ರು ಎದುರು ಮಾತಾಡಬ್ಯಾಡ. ಆತಗ ಮಕ್ಕಳಿಲ್ಲ. ನಮ್ಮ ಸ್ವಂತ ಮಕ್ಕಳಿದ್ರ ಹಿಂಗ್ ಅಂತಿರಲಿಲ್ಲ ಅನ್ನೋ ಮಾತ್ ಬರ್ತತಿ. ಏನಾ ಅಂದ್ರುಸುಮ್ನ 'ಹೂ...' ಅಂತ ಇರು. ಅದಕ್ಕಿಂತ ದೊಡ್ಡ ಮಂತ್ರಾನ ಈ ಸಂಸಾರದಾಗ ಇಲ್ ನೋಡ್... ರೊಕ್ಕದ ಬಗ್ಗೆ ಚಿಂತಿ ಮಾಡಬ್ಯಾಡ. ನಾನು ಆಯಿತವಾರ ಮತ್ತೆ ಬರ್ತೀನಿ. ಜ್ವಾಪಾನ' ಅಂತಂದು ಎಟಿಎಂ ಒಳಗಿಂದ ರೊಕ್ಕ ಬಿಡಿಸಿ ಅವನ ಕೈಗಿತ್ತು ಒಂದು ಅವನ ಎಡಗೈ ಅಮುಕಿದ. ರಹೀಮ ರೊಕ್ಕ ಜೇಬಿಗಿಳಿಸಿಕೊಳ್ಳುತ್ತಲೇ ಅಬ್ರಾಮನನ್ನ ಬಿಗಿದಪ್ಪಿದ. ಅವನ ಎದೆಯ ಮತ್ತು ಗಂಟಲ ಏರಿಳಿತ ಅವನು ದುಃಖಿಸುತ್ತಿದ್ದದ್ದು ಗೊತ್ತುಮಾಡುತ್ತಿತ್ತು. ಅವನಿಂದ ಸಾವಕಾಶವಾಗಿ ಬಿಡಿಸಿಕೊಂಡು ಮೂರನೇ ಮಹಡಿಯ ಕಿಟಕಿಯತ್ತ ನೋಡಿದ. ಅವನಮ್ಮರುಕಿಯಾ ಬೇಗಂಕಂಡಳು. ಇವನನ್ನ ನೋಡಿದ್ದೇ ಬಸ್ ಸಿಕ್ಕ ತಕ್ಷಣ ಫೋನ್ ಮಾಡು ಎಂದು ಸನ್ನೆ ಮಾಡುತ್ತಾ ಟಾಟಾ ಮಾಡಿದಳು.

ಅಬ್ರಾಮ ಒಂದು ರೀತಿಯ ಭಾರದ ಹೃದಯದಿಂದ ಗೇಟಿನತ್ತ ನಡೆದ. ಮತ್ತೊಮ್ಮೆ ಆಸ್ಪತ್ರೆಯ ಪ್ರಾರ್ಥನಾ ಮಂದಿರದ ದೀಪವನ್ನು ನೋಡಬೇಕೆನಿಸಿತು. ಗೇಟಿನ ಮುಂದುಗಡೆಯಿದ್ದ ಬಸ್ ಸ್ಟಾಪಿನಲ್ಲಿ ಹುಬ್ಬಳ್ಳಿಯ ಕಡೆಗಿನ ಬಸ್ಸಿಗಾಗಿ ಕಾದ. ರಸ್ತೆಯ ಇನ್ನೊಂದು ಬದಿಯ ಊಟದ ಹೋಟೆಲ್ಲಿನ ಮುಂದೆ ಒಂದು ಪುಟ್ಟ ಮಗುವು ತನ್ನ ತಾಯಿಗೆ ಎತ್ತಿಕೊಳ್ಳುವಂತೆ ರಚ್ಚೆ ಹಿಡಿದಿರುವುದು ಕಂಡಿತು. ಆ ತಾಯಿಯ ಒಂದು ಕಂಕುಳಲ್ಲಿ ಆಗಲೇ ಒಂದು ಮಗುವಿದೆ. ಅವಳು ಊಟ ಕಟ್ಟಿಸಿಕೊಳ್ಳುತ್ತಿದ್ದಾಳೆ. ಈ ಮಗು ಕಂಕುಳಲ್ಲಿ ತನ್ನ ಎತ್ತಿಕೊಳ್ಳಲೇಬೇಕೆಂದು ಹಠ ಮಾಡುತ್ತಿದೆ. ಅದರ ರೋದನ ರಸ್ತೆಯ ಈ ಬದಿಗೂ ಕೇಳುತ್ತಿದೆ. ತುಸುಹೊತ್ತು ಆ ಮಗುವನ್ನೇ ದಿಟ್ಟಿಸಿದ. ರುಕಿಯಾ, ಸಕೀನಾ, ಬಡೇಬಾ, ಸಯ್ಯದ, ರಹೀಮ, ಭಾಬಿ ಮತ್ತು ಕೊನೆಗೆ ತಾನು ಆ ಪುಟ್ಟ ಹುಡುಗನಂತೆಯೇ ಅನಿಸಿ ನಾಭಿಯಾಳದಿಂದ ದುಃಖ ಒತ್ತರಿಸಿ ಬಂತು... ಬಸ್ಸು, ಕಾರು, ಮೋಟಾರು ಸೈಕಲ್ಲು ಎಂದಿನಂತೆ ಸರ್ರಾಬುರ್ರ ಓಡಾಡುತ್ತಿದ್ದವು. ಅದೇ ಸಮಯಕ್ಕೆ ಅಂಬುಲ್ಸೊಂದು ಆಸ್ಪತ್ರೆಯ ಒಳಗಡೆಗೂ,ಅದಾದ ಮತ್ತೊಂದೆರಡು ನಿಮಿಷದಲ್ಲಿ ಮತ್ತೊಂದುಗಾಡಿ ಆಸ್ಪತ್ರೆಯಿಂದ ಹೊರಗಡೆ ಹೋಯಿತು. ಅದು ಬಾಡಿಗೆ ಕಾರು. ಅದರೊಳಗೆ ಕೂತಿದ್ದವರನ್ನೊಮ್ಮೆ ಗಮನಿಸಿದಾಗ ಅವರೆಲ್ಲರಲ್ಲೂ ಒಂದು ನಿರಾಳ ಭಾವವೊಂದು ತುಳುಕುತ್ತಿತ್ತು. ಬಹುಶಃ ಡಿಸ್ಚಾರ್ಜ್ ಆಗಿರಬೇಕೆನಿಸಿತು.ಮತ್ತೆ ಆ ಮಗುವನ್ನು ನೋಡಿದ. ಈಗ ಆ ತಾಯಿ ಅಳುತ್ತಿದ್ದ ಕಂದನ ಇನ್ನೊಂದು ಕಂಕುಳಲ್ಲಿ ಎತ್ತಿಕೊಂಡು ರಸ್ತೆ ದಾಟಲು ಕಾಯುತ್ತಿದ್ದಳು. ಇದೇ ಸಮಯಕ್ಕೆ ಇವನು ಕಾಯುತ್ತಿದ್ದ ಹುಬ್ಬಳ್ಳಿಗೆ ಹೋಗುವ ಬೇಂದ್ರೆ ಬಸ್ಸೊಂದು ಬಂದಿತು. ಹತ್ತಿಕೊಂಡವನೇ ಖಾಲಿಯಿದ್ದ ಕಿಟಕಿ ಸೀಟು ಹುಡುಕಿ ಕೂತು ತನ್ನ ಮೊಬೈಲನ್ನೊಮ್ಮೆ ತೆಗೆದು ನೋಡಿದ. 'ಐ ಹ್ಯಾವ್ ಟೇಕನ್ ಆ್ಯನ್ ಅಪಾಯಿಂಟ್ಮೆಂಟ್ ವಿಥ್ ಡಾಕ್ ಟುಮಾರೊ ಇವಿನಿಂಗ್. ಬಿ ದೇರ್. ಐ ಆ್ಯಮ್ ವಿಥ್ ಯು... ಯುವರ್ ಲವ್' ಎಂದು ಬರೆದ ಮೆಸೇಜು ಓದಿ ಮೊಬೈಲು ಒಳಗಿಟ್ಟು ಕೊಂಡು ಕಿಟಕಿಗೆ ಆತುಕೊಂಡು ಗಾಳಿಗೆ ಮುಖವೊಡ್ಡಿದ. ದಾರಿ ಸಾಗುತ್ತಾ ಹೊಸ ಹಾದಿ ತೆರೆದುಕೊಳ್ಳಲಾರಂಭಿಸಿತು. ಮರ, ಗಾಳಿ, ದಾರಿ ಹಿಂದಣಕ್ಕೆ ಸಾಗುತ್ತಿದ್ದವು. ಸಣ್ಣಗೆ ಕಣ್ಣು ಹತ್ತಿತು. ಬೆಳಿಗ್ಗೆ ಅರ್ಧಕ್ಕೆ ನಿಂತಿದ್ದ ಕನಸು ಮುಂದುವರೆಯಲು ಶುರುವಾಯಿತೇನೋ ಎಂಬಂತೆ ಒಂದು ಸಣ್ಣ ಮುಗುಳ್ನಗು ಅವನ ಮುಖ ವನ್ನಾವರಿಸಿತು. ಬಸ್ಸು ಮತ್ತು ಅಬ್ರಾಮನ ಕನಸು ಮುಂದು ಮುಂದಕ್ಕೆಚಲಿಸುತ್ತಿತ್ತು. ■



ಈಶ್ವರ್

## ಆಸಕ್ತಿ

ಕೇವಲ ಐವತ್ತು ರೂಪಾಯಿ
ಎಂದೆ ನಾನು
ಅವನು ಪುಸ್ತಕದ ಬೈಂಡ್‌ನಲ್ಲಿ
ಕವಯಿತ್ರಿಯ ಚಂದದ ಫೋಟೊ
ನೋಡಿ ಕೇಳಿದ
ಕೇವಲ ಬೈಂಡ್ ಮಾತ್ರ
ಕೊಡಬಹುದಾ?
ಬೇಕಿದ್ದರೆ ಕೊಡುತ್ತೇನೆ
ನೂರು ರೂಪಾಯಿ

– ಕಾಸರಗೋಡು ಅಶೋಕ್ ಕುಮಾರ್

## ವಿಪರ್ಯಾಸ

ದಿನಹೋದಂತೆ
ಅರಳುತಿದೆ ಹುಡುಗಿ
ನಿನ್ನ **body**
ನಿನ್ನ ನೋಡುತ್ತಾ ನೋಡುತ್ತಾ
ನಾನು ಹೋಗುತ್ತಿದ್ದೇನೆ
ಬಾಡಿ!

– ಕಾಸರಗೋಡು ಅಶೋಕ್ ಕುಮಾರ್

## ನಗೆಮುಗುಳು

ನಿದ್ರಿಸುವ
ಹಸುಗಂದನ
ಹಾಲ್ದುಟಿಯ
ನಗೆಮುಗುಳು
ನಿನ್ನ ಪ್ರೀತಿ!

– ಡಾ. ಕೆ. ಬಿ. ರಂಗಸ್ವಾಮಿ

## ವಿಚಿತ್ರ

ಗಗನಕ್ಕೇರಿದರೂ
ಕಂಬನಿ
ಕೈಗೆ ಸಿಕ್ಕರೂ
ಕಂಬನಿ.
ಈರುಳ್ಳಿಯೇ!
ಎಂಥ
ವಿಚಿತ್ರ ನೀ.

– ಡಾ. ವಿ. ಪುಗಳೇಂದಿ, ಬಳ್ಳಾರಿ